ಸಿಸಿ ನಂಃ 2226/2024

ಸಿ.ಡಬ್ಲೂ – 14

ಪಿ.ಡಬ್ಲೂ – 7

## 4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಾನಂದ ಕಮತಗಿ |
| ತಂದೆಯ ಹೆಸರು | : | ಸತ್ಯಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪಿ.ಐ ಧಾರವಾಡ ಗ್ರಾಮೀಣ ಪೊಲೀಸ್ ಠಾಣೆ |
| ವಾಸ ಸ್ಥಳ | : | ಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು :24-02-2026

**ಮುಖ್ಯ ವಿಚಾರಣೆ : ಮಾನ್ಯ ಹಿಸಸಅ ರವರಿಂದ**

ಅಗಸ್ಟ –2023 ರಿಂದ ಇಲ್ಲಿಯವರೆಗೂ ರವರೆಗೆ ಧಾರವಾಡ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಪಿ ಆಯ್ ಆಗಿ ಕೆಲಸ ಮಾಡಿರುತ್ತೇನೆ.

ದಿನಾಂಕಃ 29–05–2023 ರಂದು ನಾನು ಠಾಣೆಯಲ್ಲಿದಾಗ ಚಾಸಾ–1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಆರೋಪಿತರ ವಿರುದ್ಧ ಪ್ರ.ವ.ವ ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿರುತ್ತೇನೆ. ಅದೇ ದಿನ ಕಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಮೃತರ ಶವ ಪಂಚನಾಮೆಯನ್ನು ಚಾಸಾ–2 ಮತ್ತು 3 ರವರ ಸಮಕ್ಷಮ

ಸಿಸಿ ನಂಃ 2226/2024
ಸಿ.ಡಬ್ಲೂ – 14
ಪಿ.ಡಬ್ಲೂ – 7

ಮಾಡಿರುತ್ತೇನೆ. ಅದೇ ದಿನ ಅಪಘಾತಕ್ಕೊಳಗಾದ ಬೈಕ ನಂ.25/ಎಚ್ ಸಿ –2997 ರ ತಾಂತ್ರಿಕ ಪರೀಕ್ಷೆಗಾಗಿ ತಡೆ ಹಿಡಿದಿರುತ್ತೇನೆ. ಅದೇ ದಿನ ಚಾಸಾ–6 ಮತ್ತು 7 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕಃ 30–05–2024 ರಂದು ಘಟಣಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ–1 ರವರು ತೋರಿಸಿದ ಸ್ಥಳದಲ್ಲಿ ಚಾಸಾ–4 ಮತ್ತು 5 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ. ಪಂಚನಾಮೆ ಕಾಲಕ್ಕೆ ಕಚ್ಚಾ ನಕ್ಷೆಯನ್ನು ತೆಗೆದಿರುತ್ತೇನೆ. ಅದೇ ದಿನ ಚಾಸಾ–9 ರವರು ನೀಡಿದ ಕಲಂ–65 ಬಿ ಪ್ರಮಾಣ ಪತ್ರವನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಐ.ಎಮ್.ವಿ ವರದಿಯನ್ನು ಮಾಡಲು ಚಾಸಾ–11 ರವರಿಗೆ ಪತ್ರವನ್ನು ಬರೆದಿರುತ್ತೇನೆ.

ದಿನಾಂಕಃ 01–06–2024 ರಂದು ಚಾಸಾ–8 ರವರಿಗೆ ಕಲಂ.133 ನೋಟಿಸ್ಸ ಜಾರಿ ಮಾಡಿ ಸದರಿಯವರಿಂದ ಹೇಳಿಕೆ, ವಾಹನ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿ ಠಾಣೆಗೆ ಹಾಜರಾಗಿದ್ದು ಆತನಿಗೆ ನೋಟಿಸ್ಸ ಕೊಟ್ಟು ಹೇಳಿಕೆ ಪಡೆದು, ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ಸಿಸಿ ನಂಃ 2226/2024
ಸಿ.ಡಬ್ಲೂ – 14
ಪಿ.ಡಬ್ಲೂ – 7

ದಿನಾಂಕಃ 03-06-2024 ರಂದು ಚಾಸಾ-8 ರವರಿಂದ ಸೂಕ್ತ ಬಾಂಡನ್ನು ಪಡೆದುಕೊಂಡು ಬೈಕನ್ನು ಬಿಡುಗಡೆ ಮಾಡಿರುತ್ತೇನೆ. ದಿನಾಂಕಃ 05-06-2024 ರಂದು ಮೃತರ ಶವಪರೀಕ್ಷೆ ಮಾಡಿ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 14-06-2024 ರಂದು ಚಾಸಾ-11 ರವರಿಂದ ತಾಂತ್ರಿಕ ವರದಿಯನ್ನು ಪಡೆದುಕೊಂಡಿರುತ್ತೇನೆ.

ದಿನಾಂಕಃ 02-07-2024 ರಂದು ಆರೋಪಿಯ ಗಾಯದ ಪ್ರಮಾಣ ಪತ್ರವನ್ನು ಚಾಸಾ-12 ಮತ್ತು 13 ರವರಿಂದ ಪಡೆದುಕೊಂಡಿರುತ್ತೇನೆ. ತನಿಖೆಯನ್ನು ಪೂರ್ಣಗೊಳಿಸಿ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ- 1 ರಿಂದ 3 ಮತ್ತು 5 ರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1 (ಸಿ), ನಿಪಿ-2 (ಬಿ), ನಿಪಿ-3 (ಬಿ) ಮತ್ತು ನಿಪಿ.5(ಸಿ) ಎಂದು ಗುರುತಿಸಲಾಯಿತು. ಇಂಗ್ವೆಷ್ಟ ಪಂಚನಾಮೆಯನ್ನು ನಿಪಿ.12 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 12 (ಎ) ಎಂದು ಗುರುತಿಸಲಾಯಿತು. ಇಂಗ್ವೆಷ್ಟ ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರ ವನ್ನು ನಿಪಿ.13 ಎಂದು ಗುರುತಿಸಲಾಯಿತು. ಆರ್ .ಟಿ.ಓ ಅವರಗೆ ಬರೆದ ಪತ್ರ ನಿಪಿ.14 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 14(ಎ) ಎಂದು ಗುರುತಿಸಲಾಯಿತು. ಪ್ರವವ ವರದಿ ನಿಪಿ. 15 ಎಂದು

ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 15 (ಎ) ಎಂದು ಗುರುತಿಸಲಾಯಿತು. ಕಲಂ.65–ಬಿ ಪ್ರಮಾಣ ಪತ್ರ ನಿಪಿ.16 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 16 (ಎ) ಎಂದು ಗುರುತಿಸಲಾಯಿತು.ಚಾಸಾ–8 ರವರು ನೋಟಿಸ್ಸಗೆ ಕೊಟ್ಟ ಉತ್ತರ ಹಾಗೂ ವಾಹನದ ದಾಖಲೆಗಳನ್ನು ಒಟ್ಟಾರೆಯಾಗಿ ನಿಪಿ.17 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 17 (ಎ) ಎಂದು ಗುರುತಿಸಲಾಯಿತು. ಆರೋಪಿಗೆ ಕಳುಹಿಸಿದ ನೋಟಿಸ್ಸ ನಿಪಿ.18 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 18 (ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

ದೂರನ್ನು ಚಾಸಾ–1 ಕೊಟ್ಟಿದ್ದು, ಆ ಸಮಯದಲ್ಲಿ ಅವರ ಜೊತೆ 3 ಜನ ಬಂದಿದ್ದರು ಅವರು ಹೆಸರು ನನಗೆ ಗೊತ್ತಿಲ್ಲ. ನಿಪಿ.12 ಕ್ಕೆ ಪಂಚರ ಸಹಿ ಇಲ್ಲ ಎಂದರೆ ಸರಿಯಲ್ಲ. ನಿಪಿ.12 ಠಾಣೆಯಲ್ಲಿ ತಯಾರು ಮಾಡಿದ್ದೆವೆ ಎಂದರೆ ಸರಿಯಲ್ಲ. ನಿಪಿ.2 ನ್ನು ಪಂಚರ ಮಾಹಿತಿ ಮೇರೆಗೆ ತಯಾರು ಮಾಡಿರುತ್ತೇವೆ. ನಿಪಿ.3 ನಿಖರವಾಗಿ ಇಲ್ಲ ಎಂದರೆ ಸರಿಯಲ್ಲ.

ಸಿಸಿ ನಂಃ 2226/2024
ಸಿ.ಡಬ್ಲೂ – 14
ಪಿ.ಡಬ್ಲೂ – 7

ನಿಪಿ.2 ಮತ್ತು 3 ಠಾಣೆಯಲ್ಲಿ ತಯಾರು ಮಾಡಿದ್ದೆವೆ ಎಂದರೆ ಸರಿಯಲ್ಲ. ಚಾಸಾ–6 ಮತ್ತು 7 ರವರು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳು ನಾವೇ ಸೃಷ್ಟಿ ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ತಪ್ಪಿನಿಂದ ಆಗದೇ ಇದ್ದರೂ ಸಹ ಮೃತನ ಕುಟುಂಬಕ್ಕೆ ಪರಿಹಾರ ಬರಲಿ ಎಂದು ಆತನ ವಿರುದ್ಧ ಸುಳ್ಳು ದೂರು ದಾಖಲಿಸಿಕೊಂಡು ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.